ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ, ಈಗ ಈ ಹುಟ್ಟುವಳಿ ಹೆಚ್ಚಾಗಲಂ ಕೃಷಿ ಇಲಾಖೆಯು ವಿಭಾಗಗಳನ್ನೇನಾದರೂ ಗುರುತುಪಡಿಸಿದೆಯೆ ? ಹೇಗೆ ? ಕೆಲವು ಬೆಳೆಗಳು ಚೆನ್ನಾಗಿ ಬರುವಂಥ ಪ್ರದೇಶವನ್ನು ಗುರುತಿಸಿ ಅಲ್ಲಿ ಹೆಚ್ಚಿನ ಉತ್ಪಾದನೆಯನ್ನು ತೆಗೆದುಕೊಳ್ಳಲಿಕ್ಕೆ ಏನಾದರೂ ತಾವು ಕಾರ್ಯಕ್ರಮವನ್ನು ಮುಂದುಪರಿಸಿದ್ದಾರಾ ? ರೈತರ ಉತ್ಪಾದನೆಯನ್ನು ಹೆಚ್ಚಿಸಲು ಏನು ಯೋಜನೆಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದು ಮುಖ್ಯವಾಗಿ ಬೇಕಾಗಿರತಕ್ಕಂಥದ್ದು. ಇದರ ಬಗ್ಗೆ ಏನಂ ಹೇಳುತ್ತೀರಿ ?

ಶ್ರೀ ಬಸವರಾಜ್‌ಪಾಟೀಲ್ ಅನ್ನರಿ.—ಮಾನ್ಯ ಅಧ್ಯಕ್ಷರೇ, ಶಾಸಕರು ಕೇಳುವಂಥ ಪ್ರಶ್ನೆಯಲ್ಲಿ ಈಗಾಗಲೇ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಅನೇಕ ಹೆಸರುಗಳ ತಳಿಗಳನ್ನು, ಬೀಜಗಳನ್ನು ರೈತರಿಗೆ ಕೊಡ ಬೇಕೆಂದು ಮತ್ತು ಅವರಿಗೆ ತರಬೇತಿಯನ್ನು ಕೊಡುವ ಬಗ್ಗೆ ಸಲಹೆಗಳನ್ನು ಕೊಡುತ್ತಿದ್ದೇವೆ. ಅವರ ತರಬೇತಿಯನ್ನು ನೋಡಿ ಆ ಭಾಗದಲ್ಲಿ ರೈತರಿಗೆ ಸಲಹೆಗಳನ್ನು ಕೊಡುತ್ತಿದ್ದೇವೆ. ಕಿರು ಚೀಲಗಳ ಮುಖಾಂತರವಾಗಿ ಹೊಸ ತಳಿಗಳನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ, ಮಧ್ಯಮ ರೈತರಿಗೆ ಕೊಡ ಬೇಕೆಂಬ ವ್ಯವಸ್ಥೆಯನ್ನು ಮಾಡಿದೆ. ಆದರ ಪ್ರಕಾರವಾಗಿ ಮಾಡುತ್ತಿದ್ದೇವೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ರೈತರು ಅನೇಕ ಸಲ ಲಾಭದಾಯಕವಾಗುವಂಥ ಒಳ್ಳೆಯ ಬೆಲೆ ಬರತಕ್ಕಂಥದ್ದು ಕಂಡು ಬಂದರೆ ತಕ್ಷಣ ಅದೇ ಬೆಳೆಯನ್ನು ಎಲ್ಲಾ ಕಡೆಯಲ್ಲೂ ಬೆಳೆಯಲಿಕ್ಕೆ ಪ್ರಾರಂಭಮಾಡುತ್ತಾರೆ. ಕೆಲವೊಂದು ಪ್ರದೇಶದಲ್ಲಿ ಇಂಥ ಬೆಳೆಗಳು ಹೆಚ್ಚು ಇಳುವರಿ ಕೊಡಕತ್ತವೆ. ಆದ್ದರಿಂದ ಇದನ್ನು ನಿಗಧಿಪಡಿಸಿ ರೈತನಿಗೆ ಹೆಚ್ಚು ಲಾಭದಾಯಕವಾಗುವಂತೆ ಬೆಳೆಯನ್ನು ತೆಗೆಯಲಿಕ್ಕೆ ಅವನಿಗೆ ಹೆಚ್ಚು ಅನುಕೂಲವಾಗುವಂತೆ ತರಬೇತಿಯನ್ನು ಕೊಡುವುದರ ಬಗ್ಗೆ ಕೃಷಿ ಇಲಾಖೆ ಅಥವಾ ಕೃಷಿ ವಿಶ್ವವಿದ್ಯಾನಿಲಯದವರು ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದಾರೆಯೇ ?

ಶ್ರೀ ಬಸವರಾಜ್ ಪಾಟೀಲ್ ಅನ್ನರಿ.—ಮಾನ್ಯ ಅಧ್ಯಕ್ಷರೇ, ಕೆಲವು ಕಡೆ ಹವಾಮಾನಕ್ಕೆ ಅನು ಗುಣವಾಗಿ ಆ ಭಾಗದಲ್ಲಿ ನಾವು ರೈತರಿಗೆ ಚೆನ್ನಾಗಿ ಬೆಳೆಯಲಿಕ್ಕೆ, ಅನುಕೂಲವಾಗುವಂಥ ಬೀಜಗಳನ್ನು ಮತ್ತು ಆ ಬಗ್ಗೆ ಉತ್ತೇಜನವನ್ನು ಮಾಡಬೇಕೆಂಬ ಪರಿಸ್ಥಿತಿಯಲ್ಲಿ ನಮ್ಮ ಹತ್ತಿರ ಅಂಕಿಸಂಖ್ಯೆಗಳು ಇದೆ ಮಾನ್ಯ ಸದಸ್ಯರು ಕೂಡಾ ಈ ಬಗ್ಗೆ ಒಂದೆರಡು ಮಾತನ್ನು ಹೇಳಿದರು. ಕಿರುಚೀಲಗಳ ಪ್ರಕಾರ ನಾವು ಹೊಸ ಹೊಸ ತಳಿಗಳನ್ನು ಮತ್ತು ಬೀಜಗಳನ್ನು ರೈತರಿಗೆ ಕೊಡುವ ಬಗ್ಗೆ ಮತ್ತು ಮುಂಗಾರಿನಲ್ಲಿ ಹೊಸ ಬೀಜಗಳನ್ನು ಕೊಟ್ಟು ಸಾಧನೆ ಮಾಡತಕ್ಕಂಥ ಗುರಿಯನ್ನು ಹವ್ಮಿಕೊಂಡಿದ್ದೇವೆ. ರೈತರಿಗೆ ಅನೇಕ ಸ್ಥಳಗಳನ್ನೂ ಕೂಡ ಗುರುತುಮಾಡಿದ್ದೇವೆ.

ಅಧ್ಯಕ್ಷರು.—ಪ್ರಶ್ನೆ ಸಂ ೫೧೧ (೯೮೬) : ಶ್ರೀ ಸಿ. ಕಣ್ಣನ್‌ರವರು ಗೈರುಹಾಜರಿ,

ಸುಳ್ಯ ತಾಲ್ಲೂಕಿನ ಬೆಳ್ಳಾರೆಗೆ ಪ್ರಥಮ ದರ್ಜೆ ಕಾಲೇಜಿನ ಮಂಜೂರಾತಿ

೯೬೩. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ ?

ಅ) ಜಿಲ್ಲೆಗೊಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಂ ನೀಡಲಾಗುವುದು ಎಂದು ಸರ್ಕಾರ ದವರು ತೀರ್ಮಾನಿಸಿರುವುದು ನಿಜವೇ, ಹಾಗಿದ್ದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಳ ತಾಲ್ಲೂಕಿನ ಬೆಳ್ಳಾರೆ ಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಬಿಸಲಂ ಪ್ರಸ್ತಾವನೆ ಇದ್ದಿತ್ತೆ ?

ಆ) ಹಾಗಿದ್ದಲ್ಲಿ ಬೆಳ್ಳಾರೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಸಕ್ತ ಸಾಲಿನಲ್ಲಿಯೇ ಮಂಜೂರು ಮಾಡಿ ಪ್ರಾರಂಬಿಸಲಾಗುವುದೇ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ಹಂತಹಂತವಾಗಿ ತಾಲ್ಲೂಕುಗಳಿಗೆ ಪ್ರಥಮ ದರ್ಜೆ ಕಾಲೇಜಗಳನ್ನು ಮಂಜೂರು ಮಾಡುವುದೇ ಸರ್ಕಾರವ ಉದ್ದೇಶ. ಬೆಳ್ಳಾರೆಯಲ್ಲಿ ಪ್ರಥಮ ದರ್ಜೆಕಾಲೇಜಂ ಪ್ರಾರಂಭಿಸುವ ಬಗ್ಗೆ ಮನವಿ ಬಂದಿತ್ತು.

ಸಂಪನ್ಮೂಲ ಮಿತಿಯಿಂದಾಗಿ ೧೯೮೬-೮೭ ೧೯೮೭-೮೮ರ ಸಾಲಿನಲ್ಲಿ ಯಾವುದೇ ಪ್ರಥಮ ದರ್ಜೆ ಕಾಲೇಜಂಗಳಿಗೆ ಮಂಜೂರಾತಿ ನೀಡಬಾರದೆಂದು ಸರ್ಕಾರ ತೀರ್ಮಾನಿಸಿದೆ.

ಶ್ರೀ ಕೆ. ಕಂಶಾಲ.—ಮಾನ್ಯ ಅಧ್ಯಕ್ಷರೇ, ಮಲೆನಾಡು ಪ್ರದೇಶವಾದ ಬೆಳ್ಳಾರೆಯಲ್ಲಿ ಕಾಲೇಜು ಆಗಬೇಕು ಎಂದು ಮನವಿ ಬಂದಿದ್ದರೂ ಕೂಡಾ ೮೬–೮೭ನೇ ಸಾಲಿನಲ್ಲೂ ಕೂಡಾ ಹಣದ ಸಂಪನ್ಮೂಲ ಇಲ್ಲ, ಅಲ್ಲಿಗೆ ಕಾಲೇಜು ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಮಲೆನಾಡು ಪ್ರದೇಶದಲ್ಲಿ ಇದು ಬಹಳ ಅಗತ್ಯವಿರುವುದರಿಂದ ೧೯೮೭–೮೮ ನೇ ಸಾಲಿನಲ್ಲಾದರೂ ಇದನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ಮಂಜುನಾಥ್.—ಈ ವರ್ಷ ಕೂಡಾ ತೀರ್ಮಾನ ಮಾಡಿಲ್ಲ. ನಮಗೆ ಹಣದ ತೊಂದರೆಯಿಂದ ಈ ವರ್ಷ ಕಾಲೇಜನ್ನು ಮಾಡುವುದಕ್ಕಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ಮಲೆನಾಡು ಪ್ರದೇಶವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದೇ ಒಂದು ಶಾಲೆ ಮಾತ್ರ ಇದೆ, ಬೇರೆ ಇಲ್ಲ. ಆದುದರಿಂದ ಈ ದೃಷ್ಟಿಯಿಂದಲಾದರೂ ಪ್ರಥಮ ದರ್ಜೆ ಕಾಲೇಜನ್ನು ಕೊಡುವ ಹಾಗೆ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ್.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಬಹಳ ಇವೆ. ಮತ್ತೆ ಈ ವರ್ಷ ಅಲ್ಲಿಗೆ ಮತ್ತೊಂದು ಕೊಡುವುದು ಬಹಳ ಕಷ್ಟ ಇದೆ. ಮುಂದಿನ ವರ್ಷ ಯೋಚನೆ ಮಾಡೋಣ.

ಪ್ರಶ್ನೆ ೩೧೩(೯೭೦) ಹೆಚ್. ಕೆ. ಕಂಪಾರಸ್ವಾಮಿ	ಸದಸ್ಯರು
ಪ್ರಶ್ನೆ ೩೧೪(೯೩೫) ವಸಂತ ಬಂಗೇರ	ಹಾಜರಿಲ್ಲ.

ರಾಜ್ಯದಲ್ಲಿರುವ ತಾಂತ್ರಿಕ ಕಾಲೇಜುಗಳು

೯೪೪. ಶ್ರೀ ಎಸ್. ಕೆ. ಕಾಂತಾ (ಗುಲ್ಬರ್ಗ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಾನ್ಯತೆ ಪಡೆದ ಖಾಸಗಿ ತಾಂತ್ರಿಕ ಕಾಲೇಜುಗಳ ಸಂಖ್ಯೆ ಎಷ್ಟು ? ಜಿಲ್ಲಾವಾರು ವಿವರಗಳನ್ನು ಕೊಡುವುದು :

ಆ) ರಾಜ್ಯದ ಗ್ರಾಮಾಂತರ ಭಾಗಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕಾಲೇಜುಗಳನ್ನು ಪ್ರಾರಂಭ ಮಾಡಲಾಗಿದೆ, ಮತ್ತು ಗುಲ್ಬರ್ಗಾ ಜಿಲ್ಲೆಯಲ್ಲಿ ಅಂಥ ಖಾಸಗಿ ಕಾಲೇಜುಗಳ ವಿವರ ನೀಡುವುದು ;

ಇ) ಕೆಲವು ಖಾಸಗಿ ಕಾಲೇಜುಗಳು ಮಾನ್ಯತೆ ಪಡೆಯದೆ ಇದ್ದರೂ ತಾಂತ್ರಿಕ ಕಾಲೇಜು ನಡೆಸುತ್ತಿದ್ದಾರೆಯೇ ಹಾಗಿದ್ದಲ್ಲಿ ಅವರ ಮೇಲೆ ತೆಗೆದುಕೊಂಡ ಕ್ರಮವೇನು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಅ) ೩೪ : ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದೆ (ಅನುಬಂಧ–೧)

ಆ) ಎರಡು ಗುಲ್ಬರ್ಗಾ ಜಿಲ್ಲೆಯಲ್ಲಿ ಗ್ರಾಮಾಂತರ ಭಾಗದಲ್ಲಿ ಕಳೆದ ಮೂರು ವರ್ಷದಲ್ಲಿ ಖಾಸಗಿ ತಾಂತ್ರಿಕ ಕಾಲೇಜನ್ನು ಪ್ರಾರಂಭಿಸಿಲ್ಲ.

ಇ) ಮಾನ್ಯತೆ ಪಡೆಯದ ತಾಂತ್ರಿಕ ಕಾಲೇಜು ಯಾವುದೂ ಇಲ್ಲ.

ಕರ್ನಾಟಕ ರಾಜ್ಯದಲ್ಲಿರುವ ಜಿಲ್ಲಾವಾರು ಇಂಜಿನಿಯರಿಂಗ್ ಕಾಲೇಜುಗಳು

ಬೆಂಗಳೂರು ಜಿಲ್ಲೆ

---

೧) ಎಂ. ಎಸ್. ರಾಮಯ್ಯ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ, ಗೋಕುಲ ಎಕ್ಸ್‌ಟೆನ್‌ಷನ್, ಪೋಸ್ಟ್ ಬೆಂಗಳೂರು–೫೬೦೦೫೪